ಅವಳಿಗೂ ಈ ಮದುವೆ ಬೇಕಿರಲಿಲ್ಲ! ಅಕ್ಕ ಮತ್ತು, ಅಪ್ಪನ ಒತ್ತಾಯದಿಂದ ಮದುವೆ ಆಗಬೇಕಾಯ್ತು...'

'ನನ್ನ ಮಗಳನ್ನು ಮದುವೆ ಆಗದಿದ್ರೆ ಆತ್ಮಹತ್ಯೆ ಮಾಡಿಕೊಳ್ತೀನಿ... ಅಂತ ಅಕ್ಕ ಹೆದರಿಸಿದಳು. ನೀನು ಬೇರೆ ಯಾರನ್ನೇ ಮದುವೆ ಆದರೂ ನಮ್ಮ ಆಸ್ತಿ ಬೇರೆಯವರಿಗೆ ಹೋಗುತ್ತೆ ಅಂತ ಅಕ್ಕ ಹೇಳಿದಳು. ಅವಳ ಲಾಜಿಕ್ಕೇ ನಂಗೆ ಅರ್ಥ ಆಗಲಿಲ್ಲ. ನನ್ನ ಹೆಂಡ್ತಿ, ನನ್ನ ಮಕ್ಕಳು ಬೇರೆಯವರು ಹೇಗಾಗ್ತಾರೆ ಎಂದು ಕೇಳಿದೆ. ಅದಕ್ಕವಳು ಈಗ ಕಾಲ ಸರಿ ಇಲ್ಲ, ಆಸ್ತಿ ಆಸೆಗೆ ನಿನ್ನ ಹೆಂಡ್ತಿ ಕಡೆಯವರು ನಿನ್ನ ಜೀವಕ್ಕೆ ಅಪಾಯ ಮಾಡಬಹುದು ಅಂದಳು. ಅಪ್ಪನಿಗೂ ಅದನ್ನೇ ಹೇಳಿ ಹೇಳಿ ಅವರ ತಲೆ ಕೆಡಿಸಿದ್ದಳು.

ಭಾವ ಸತ್ತ ಮೇಲೆ ಅಕ್ಕ, ಮಗಳ ಜತೆಯಲ್ಲಿ ನಮ್ಮ ಮನೆಗೆ ಬಂದು ಸೇರಿಕೊಂಡಳು. ಅಮ್ಮ ಸತ್ತ ಮೇಲೆ ಅವಳೇ ಮನೆ ಜವಾಬ್ದಾರಿ ವಹಿಸಿಕೊಂಡಳು. ಅಕ್ಕನಿಗೆ ಅವಳ ಗಂಡನ ಕಡೆಯ ಆಸ್ತಿ ಸಿಕ್ಕಲಿಲ್ಲ. ಅಪ್ಪ ತಮ್ಮ ಆಸ್ತಿಯನ್ನು ನಮ್ಮಿಬ್ಬರಿಗೂ ಹಂಚಿ ರಿಜಿಸ್ಟರ್ ಮಾಡಿಸಿದ್ದಾರೆ. ನಂಗೆ ಮೂರು ಕೋಟಿಯಷ್ಟು ಆಸ್ತಿ ಬಂದಿದೆ. ಒಂದು ಮಾರ್ಕೆಟ್ ಕಾಂಪ್ಲೆಕ್ಸ್. ಎರಡು ಮನೆಗಳು. ಅದರಿಂದ ತಿಂಗಳಿಗೆ ಎರಡು ಲಕ್ಷ ಬಾಡಿಗೆ ಬರುತ್ತೆ. ಅಕ್ಕನಿಗೂ ಅಷ್ಟೇ ಆಸ್ತಿ ಸಿಕ್ಕಿದೆ. ತನ್ನ ಮಗಳನ್ನು ಬೇರೆ ಯಾರಿಗಾದರೂ ಮದುವೆ ಮಾಡಿಕೊಟ್ಟರೆ ನನ್ನ ಆಸ್ತಿಯನ್ನು ಅವಳ ಗಂಡನ ಕಡೆಯವರು ಅನುಭವಿಸ್ತಾರೆ. ಅವನು ನನ್ನ ಮಗಳನ್ನು ಸರಿಯಾಗಿ ನೋಡಿಕೊಳ್ತಾನೆ ಅನ್ನೋ ಗ್ಯಾರಂಟಿ ಇಲ್ಲ. ನಮ್ಮ ಆಸ್ತಿ ನಮ್ಮನಮ್ಮಲ್ಲೇ ಇರಬೇಕು. ನನ್ನ ಮಗಳನ್ನ ನೀನೇ ಮದುವೆಯಾಗು ಅಂತ ಎರಡು ವರ್ಷ ಒತ್ತಾಯ ಮಾಡಿದಳು. ಆಮೇಲೆ ಅಪ್ಪನಿಗೆ ಮರೆವಿನ ಕಾಯಿಲೆ ಶುರುವಾಯಿತು. ಅಕ್ಕನೇ ಅವರನ್ನು ನೋಡಿಕೊಳ್ತಿದ್ದಾಳೆ. ಆ ಮುಲಾಜಿಗೆ ನಾನು ಮದುವೆಗೆ ಒಪ್ಪಿಕೊಂಡೆ...'

ಅಕ್ಕನ ಮಗಳ ಹೆಸರು ಸುಚಿತ್ರಾ ಅಂತ. ನನಗಿಂತ ಒಂಬತ್ತು ವರ್ಷ ಚಿಕ್ಕವಳು. ನನ್ನ ಜತೆಯಲ್ಲೇ ನಮ್ಮ ಮನೆಯಲ್ಲೇ ಬೆಳೆದವಳು. ಚಿಕ್ಕವಳಿದ್ದಾಗ ನನ್ನ ಅಣ್ಣ ಅಂತ ಕರೀತಿದ್ದಳು. ಮದುವೆ ಮಾತು ಶುರುವಾದ ಮೇಲೆ ಅಕ್ಕನೇ ಅವನು ನಿನ್ನ ಅಣ್ಣ ಅಲ್ಲ, ಮಾವ ಅಂತ ಹೇಳಿದ ಮೇಲೆ ಅವಳು ಮಾವ ಅಂತ ಕರಿಯೋಕೆ ಶುರುಮಾಡಿದಳು. ನನ್ನ ಮದುವೆಯ ಟ್ರಾಜೆಡಿ ಏನು ಗೊತ್ತಾ? ನಮ್ಮ ಮೊದಲ ರಾತ್ರಿ ಅವಳ ಬಾಯ್‌ಫ್ರೆಂಡ್ ಅಂತ ಹೇಳಿಕೊಂಡವನೊಬ್ಬ ನಂಗೆ ಫೋನ್ ಮಾಡಿದ. ಸರ್, ಸುಚಿತ್ರಾ ನಾನು ಪ್ರೀತಿಸ್ತಾ ಇದ್ದೀವಿ ಅಂದ. ನಂಗೆ ಒಳ್ಳೇ ಕೆಲಸ ಇಲ್ಲ. ಈಗ ಮದುವೆ ಮಾಡಿಕೊಂಡರೆ ಅವಳನ್ನು ಸಾಕೋ ಶಕ್ತಿಯೂ ಇಲ್ಲ. ಅದರಿಂದಾಗಿ ನಮ್ಮ ಪ್ರೀತಿಯ ವಿಷಯವನ್ನು ನಿಮ್ಮ ಮನೆಯಲ್ಲಿ ಹೇಳೋಕೆ ಆಗಲಿಲ್ಲ ಅಂದ.

ಈಗ ನಾನೇನು ಮಾಡಬೇಕು ಎಂದು ಅವನನ್ನೇ ಕೇಳಿದೆ. ಅದಕ್ಕವನು ಈಗಲೂ ನಾನು ಸುಚಿತ್ರಾಳನ್ನು ಮದುವೆ ಆಗೋಕೆ ರೆಡಿ ಅಂದ. ಆಸ್ತಿಗಾಗಿ ನಾನು ಅವಳನ್ನು ಪ್ರೀತಿಸಲಿಲ್ಲ ಎಂದು ಹೇಳಿದ. ಒಳ್ಳೆಯ ಕೆಲಸ ಸಿಕ್ಕ ಕೂಡಲೇ ಅವಳನ್ನು ಮದುವೆ ಮಾಡಿಕೊಳ್ತೀನಿ ಅಂದ. ಅವನ ಸಿನ್ಸಿಯಾರಿಟಿ ನಂಗೆ ಇಷ್ಟವಾಯ್ತು. ಆ ಮೇಲೆ ಅಕ್ಕನ ಎದುರಲ್ಲೇ ಸುಚಿತ್ರಾಳನ್ನು ಕೂರಿಸಿಕೊಂಡು ವಿಚಾರಿಸಿದೆ. ಅವಳು ಏನೂ ಹೇಳದೆ ಸುಮ್ಮನೆ ಅಳ್ತಾ ಇದ್ಲು.

ನನ್ನ ಮದುವೆ ಆಗೋಕೆ ನಿಂಗೆ ಇಷ್ಟ ಇದೆಯಾ ಅಂತ ನಾನೇ ಕೇಳಬೇಕಿತ್ತು. ಕೇಳಿದ್ದರೆ ಈ ಪರಿಸ್ಥಿತಿ ಬರ್ತಿರಲಿಲ್ಲ ಅನ್ನಿಸಿತು. ಸುಚಿತ್ರಾಗೆ ಡೈವೋರ್ಸ್ ಕೊಡ್ತೀನಿ. ಅವಳನ್ನು ಆ ಹುಡುಗನಿಗೆ ಕೊಟ್ಟು ಮದುವೆ ಮಾಡು. ಅವಳಾದರೂ ಸುಖವಾಗಿರಲಿ ಅಂತ ಅಕ್ಕನಿಗೆ ಹೇಳಿ ಬಂದು ಬಿಟ್ಟೆ. ನನ್ನ ಆಸ್ತೀನೂ ಅವಳಿಗೇ ಬರೆದು ಕೊಡ್ತೀನಿ ಅಂತಲೂ ಹೇಳಿದೆ. ಅಪ್ಪನಿಗೆ ಈ ವಿಷಯ ಗೊತ್ತಿಲ್ಲ. ಅವರಿಗೆ ನಮ್ಮ ನೆನಪೇ ಇಲ್ಲ. ಸುಚಿತ್ರಾ ಲವ್ ಮಾಡಿರೋ ಹುಡುಗ ಕೆಳ ಜಾತಿಯವನಂತೆ! ಆಸ್ತಿ ಆಸೆಗೆ ಅವನು ನನ್ನ ಮಗಳನ್ನು ಕೊಲ್ಲೋದಕ್ಕೆ ಹೇಸೋದಿಲ್ಲ ಅಂತ ಅಕ್ಕ ಹೇಳ್ತಾಳೆ! ಅವಳ ಹಣೆಯಲ್ಲಿ ಏನು ಬರೆದಿದೆಯೂ ಹಾಗೇ ಆಗಲಿ. ಅಕ್ಕ ಅನ್ನೋ ಗೌರವ ಇದ್ದರೆ ಅವಳನ್ನು ಹೆಂಡ್ತಿ ಅಂತ ಒಪ್ಕೋ. ಬೇಡ ಅನ್ನಿಸಿದರೆ ನಿನ್ನ ಮನೆಯ ಕೆಲಸದಾಳಿನಂತೆ ಇರೋಕಾದರೂ ಅವಕಾಶ ಕೊಡು ಅಂದಳು.

ನನ್ನ ಕೈಲಿ ಆಗೋವರೆಗೆ ಅಪ್ಪನ್ನ ನೋಡಿಕೊಳ್ತೀನಿ. ಆಮೇಲೆ ನನ್ನನ್ನು ಯಾವುದಾದರೂ ವೃದ್ಧಾಶ್ರಮಕ್ಕೆ ಸೇರಿಸು ಅಂತ ಆಗಾಗ ಫೋನ್ ಮಾಡಿ ಅಳ್ತಾಳೆ.

ಸುಚಿತ್ರಾಗೆ ಎಲ್ಲವನ್ನೂ ವಿವರಿಸಿ ಹೇಳಿದೆ. ಓದಿದ್ದೀಯ, ನೋಡೋಕೆ ಚೆನ್ನಾಗಿದ್ದೀಯ. ನಿನ್ನ